# ಲ್ಯಾನ್ಕಾವಿ ದ್ವೀಪದಲ್ಲಿ...



**ಮ್ಯಾಟ್ಚಿನ್‌ಚಾಂಗ್ ಬೆಟ್ಟದ ಮೇಲೆ ಕೇಬಲ್ ಕಾರ್ ಪಯಣ ನಿಜಕ್ಕೂ ಚೇತೋಹಾರಿ. ಕಾಲ ಕೆಳಗೆ ದಟ್ಟ ಹಸಿರು ಅರಣ್ಯಗಳ ಮೇಲೆ ಕಣ್ಣು ಹಾಯಿಸುತ್ತಾ ತೂಗುಸೇತುವೆಯಲ್ಲಿ ನಡೆದಾಡುವುದು ವಿಶಿಷ್ಟ ಅನುಭವ.**

■ ಚಿತ್ರ– ಲೇಖನ:
**ಸೀತಾ ಕೇಶವ, ಸಿಡ್ನಿ**

ಮಲೇಷ್ಯಾದ ‘ಲ್ಯಾನ್ಕಾವಿ’ (langkawi) ಎನ್ನುವುದೊಂದು ದ್ವೀಪ. ರಾಜಧಾನಿ ಕ್ವಾಲಾಲಂಪೂರದಿಂದ 413 ಕಿ.ಮೀ ದೂರದಲ್ಲಿದೆ. ರೈಲು, ವಿಮಾನ ಮತ್ತು ದೋಣಿ ಸಂಚಾರದ ವ್ಯವಸ್ಥೆಗಳಿವೆ. ‘ಪೆನಾಂಗ್’ ದ್ವೀಪದಿಂದ ಇಲ್ಲಿಗೆ ಪ್ರತಿ ದಿವಸ ಮೂರು ದೋಣಿಗಳಿವೆ. ನಾವು ಕ್ವಾಲಾಲಂಪೂರದಿಂದ ವಿಮಾನದಲ್ಲಿ (ಕೇವಲ ಒಂದು ಗಂಟೆ) ಪ್ರಯಾಣಿಸಿದೆವು.

ಈ ದ್ವೀಪದ ಅರಣ್ಯ ಜೀವನ ಅನುಭವಕ್ಕೆ ಮತ್ತು ‘ಮ್ಯಾಟ್ಚಿನ್ ಚಾಂಗ್’ ಬೆಟ್ಟ ವೀಕ್ಷಣೆಗೆ ಕೇಬಲ್ ಕಾರ್ ಸೂಕ್ತ. ಈ ಕೇಬಲ್ ಕಾರ್ ಯೋಜನೆಗೆ ಚಾಲನೆ ನೀಡಿದ್ದು ಆಗಿನ ಅಧ್ಯಕ್ಷ ಡಾ.ಮಹತೀರ್ ಮಹಮ್ಮದ್. 1994 ರಲ್ಲಿ ದ್ವೀಪವನ್ನು ವಿಶ್ವದ ಅತ್ಯುತ್ತಮ ಪ್ರವಾಸಿ ತಾಣವಾಗಿಸಲು ಅವರು ಪಣತೊಟ್ಟಿದ್ದರ ಫಲವಿದು.

ಪ್ರಪಂಚದ ಅತ್ಯಂತ ಕಡಿದಾದ 900 ಮೀಟರ್ ಎತ್ತರದ ಬೆಟ್ಟಕ್ಕೆ 2001ರಲ್ಲಿ ಕಟ್ಟಿರುವ ಈ ನಯನಮನೋಹರ ತೂಗುಸೇತುವೆ ಎಂಜಿನಿಯರಿಂಗ್ ಸಾಮರ್ಥ್ಯಕ್ಕೊಂದು ಕೈಗನ್ನಡಿ. ನೆಲದಿಂದ ಯಾವ ಆಧಾರಸ್ತಂಭವೂ ಇಲ್ಲದೆ ಅತ್ಯಂತ ಕಡಿಮೆ ಅವಧಿಯಲ್ಲಿ ಅತ್ಯಂತ ಉದ್ದದ ಸೇತುವೆ ನಿರ್ಮಿಸಿರುವುದು ಅಚ್ಚರಿ ಹುಟ್ಟಿಸುತ್ತದೆ. ವಿಶ್ವದ ಮೊದಲ ಅತಿ ಉದ್ದದ ಸೇತುವೆಯಿದು. ಇದರ ಒಟ್ಟು ಉದ್ದ 125 ಮೀಟರ್, ಎತ್ತರ 83 ಮೀಟರ್. ಹಾಲಿವುಡ್‌ನ ಹಲವು ಸಾಹಸ ಚಿತ್ರಗಳ ಚಿತ್ರೀಕರಣ ಇಲ್ಲಿ ನಡೆದಿವೆ. ಲ್ಯಾನ್ಕಾವಿ ಸ್ಕೈ ಕ್ಯಾಬ್, 2006 ರಲ್ಲಿ ತೆರೆಗೆ ಬಂದ ‘ಡಾನ್’ ಸಿನಿಮಾಗಳನ್ನು ಹೆಸರಿಸಬಹುದು.

ಸಮುದ್ರ ಮಟ್ಟಕ್ಕಿಂತ 2000 ಅಡಿ ಎತ್ತರದಲ್ಲಿ ಕೇಬಲ್ ಕಾರ್ ಮೂಲಕ ಕೆಳಗಿನ ದಟ್ಟ ಕಾನನ ಮತ್ತದರ ನಡುವಿನ ಜಲಪಾತಗಳ ಮೋಹಕ ದೃಶ್ಯಗಳನ್ನು ಕಣ್ತುಂಬಿಕೊಂಡೆವು. ಪ್ರಯಾಣದ ನಡುವೆ ಒಂದು ನಿಲ್ದಾಣದಲ್ಲಿಳಿದು ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿಕೊಂಡೆವು. ನಂತರ ಇಪ್ಪತ್ತು ನಿಮಿಷದ ಪ್ರಯಾಣದಲ್ಲಿ ಸಮುದ್ರ ಮಟ್ಟಕ್ಕಿಂತ 2300 ಅಡಿ ಎತ್ತರದಲ್ಲಿರುವ ಪ್ರಖ್ಯಾತ ಆಕಾಶ ಸೇತುವೆಯನ್ನು ನೋಡಿದೆವು. ನೆಲದಿಂದ 91 ಮೀಟರ್ ಎತ್ತರದಲ್ಲಿ ತೂಗುವ ಸೇತುವೆಯ ಮೇಲೆ ನಡೆದಾಡುವ ಅನುಭವವೂ ಅನನ್ಯ. ಸುಮಾರು ಇನ್ನೂರು ಮೆಟ್ಟಿಲುಗಳನ್ನು ಹತ್ತಿ ಈ ಸೇತುವೆಗೆ ಬರಬಹುದು. ಟ್ರಾಮ್ ವ್ಯವಸ್ಥೆಯೂ ಇದೆ.

ಲ್ಯಾನ್ಕಾವಿ ದ್ವೀಪದಲ್ಲಿ ಇನ್ನೊಂದು ಅತ್ಯಂತ ಸುಂದರವಾದ ಸ್ಥಳ